**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ತಿಪಟೂರು**

**C.C. No. 21/2024**

**PW-1**

**ದಿಃ 06.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಎನ್ ಪಿ ವಕೀಲರಿಂದ :-**

ಚೆಕ್ ನೀಡಿದ ಒಂದು ತಿಂಗಳ ನಂತರ ನಗದೀಕರಣಕ್ಕಾಗಿ ಸಲ್ಲಿಸಲುವಂತೆ ಆರೋಪಿ ಹೇಳಿದ್ದರು. ಅವರು ನೀಡಿದ ಚೆಕ್ ಮೇಲೆ ದಿನಾಂಕ ಮತ್ತು ಉಳಿದ ವಿವರಣೆಯನ್ನು ಅವರೇ ಬರೆದು ಕೊಟ್ಟಿದ್ದರು. ನಾನು ಹೇಳಿದಂತೆ ಚೆಕ್ ಮೇಲೆ ಅವರು ಯಾವುದೇ ವಿವರಣೆ ಬರೆದಿರಲಿಲ್ಲ, ನಾನೇ ಅದನ್ನು ತುಂಬಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ರ ಬರವಣಿಗೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ನಿಪಿ-1ರ ಚೆಕ್ ನಲ್ಲಿ ವ್ಯತ್ಯಾಸ ಇದ್ದರೂ, ವ್ಯತ್ಯಾಸ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1ನ್ನು ನಾನೇ ಭರ್ತಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

ಚೆಕ್ಕನ್ನು ನಗದೀಕರಣಕ್ಕಾಗಿ ಸಲ್ಲಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ವಾಪಸ್ಸು ಬಂದಿರುತ್ತದೆ. ನನಗೆ ನಿಪಿ-1ರ ಚೆಕ್ಕನ್ನು ಆರೋಪಿಯು ತೆರೆದ ಚೆಕ್ ನೀಡಿದ್ದರು.

ನನಗೆ ಆರೋಪಿಯ ತಂದೆ ಪರಿಚಯಸ್ಥರು ಎನ್ನುವುದು ಸರಿ. ಅವರು ಅಡಿಕೆ ವ್ಯಾಪಾರ ಮಾಡುತ್ತಾರೆ. ಅವರಿಗೆ ಅಡಿಕೆ ಮಂಡಿ ಮತ್ತು ಟ್ರೇಡರ್ಸ್ ಇದೆ ಎನ್ನುವುದು ಸರಿ. ಅವರ ತಂದೆಯೊಂದಿಗೆ ನನಗೆ ವ್ಯವಹಾರ ಇತ್ತು ಎನ್ನುವುದು ಸರಿ. ಅವರ ಟ್ರೇಡರ್ಸ್ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನನಗೂ ಆರೋಪಿಯ ತಂದೆಗೂ ವ್ಯವಹಾರ ಇತ್ತೆ ಹೊರತು, ಆರೋಪಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆಯಿಂದ ಅಡಿಕೆ ವ್ಯವಹಾರಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಹಣ ಬರಬೇಕಾಗಿರುವುದಿಲ್ಲ. ಆರೋಪಿಗೂ ನನಗೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ಅವರ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**C.C. No. 21/2024**

PW-1

ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ತಿಪಟೂರು.